ಇದರಿಂದ ಕೆಲವು ಜಿಲ್ಲೆಗಳಿಗೆ ಅರೆ ನೀರಾವರಿ ಸೌಕರ್ಯವನ್ನು ಕಲ್ಪಿಸುವ ಯೋಜನೆ ಇದಾಗಿರುವುದರಿಂದ ಮಾಲತಿ ಜಲಾಶಯವನ್ನು ಕಟ್ಟುತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಕೆಲವೊಂದು ಜಮೀನು ಮುಳುಗಡೆಯಾಗುತ್ತದೆ ಎನ್ನುವ ಉದ್ದೇಶದಿಂದ ಮಾಲತಿ ಜಲಾಶಯ ಕಟ್ಟುವುದನ್ನು ಬಿಟ್ಟು ತುಂಗ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತಂದಿದ್ದೆ ಆದರೆ, ನನಗೆ ಗೊತ್ತಿರುವಹಾಗೆ ಮತ್ತು ತಜ್ಞರ ಅಭಿಪ್ರಾಯದಂತೆ ಮಾಲತಿ ಜಲಾಶಯ ಕಟ್ಟುವುದನ್ನು ಬಿಟ್ಟು ಮಾಡುವುದರಿಂದ ಕೇವಲ ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ, ಹಾನ್‌ಗಲ್ ತಾಲ್ಲೂಕುಗಳಿಗೆ ನೀರಾವರಿಯ ಸೌಲಭ್ಯ ಸಿಗುತ್ತದೆ. ಅದು ಮುಂಗಾರು ಬೆಳೆಗಳಿಗೆ ಮಾತ್ರ. ಅದು ಅಸ್ಯೂರ್ಡ್ ಇರಿಗೇಷನ್ ಆಗುವುದಿಲ್ಲ. ಆವೊಂದು ದೃಷ್ಟಿಯಿಂದ ಧಾರವಾಡ ಜಿಲ್ಲೆಯ ಶಿಗ್ಗಾವಿ, ಶಿರಹಟ್ಟಿ, ಸವಣೂರು ಮುಂಡರಗಿ ಮತ್ತು ಕೊಪ್ಪಳ ತಾಲ್ಲೂಕುಗಳಿಗೆ ಉಪಯೋಗವಾಗತಕ್ಕ ಈ ಮಾಲತಿ ಯೊಜನೆಯನ್ನು ಜಮೀನು ಮುಳುಗಡೆಯಾದರೂ ಪರವಾಗಿಲ್ಲ, 10ಸಾವಿರ ಎಕರೆ ಮುಳುಗಡೆಯಾಗಬಹುದು ಆದರ ಲಕ್ಷಾಂತರ ಎಕರೆ ಭೂಮಿ ನೀರಾವರಿಯಾಗುತ್ತದೆಂದು ನಾವು ತಿಳಿದು ಕೊಂಡಿದ್ದೇವೆ ಮಾಲತಿ ಜಲಾಶಯವನ್ನು ಒಳಗೊಂಡಂತೆ ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು ಇನ್ನೊಮ್ಮೆ ಇದರ ಬಗ್ಗೆ ಸರ್ವೆ ಮಾಡಿಸಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ಸದಸ್ಯರ ಅನಿಸಿಕೆಗೆ ಸ್ಪಂಧಿಸಬೇಕೆನ್ನತಕ್ಕ ಕಾಳಜಿ ನನಗಿದ್ದರೂ ಕೂಡ ಈವೊಂದು ಪರಿಸ್ಥಿತಿಯಲ್ಲಿ ನಾವು ಈ ಸಾಹಸಕ್ಕೆ ಕೈಹಾಕುವುದಕ್ಕೆ ಆಗುವುದಿಲ್ಲ. ಮುಳುಗಡೆ ಅಂದರೆ ಏನೇನು ಮಳುಗಡೆಯಾಗುತ್ತದೆಂದು ತಮಗೆ ಗೊತ್ತಿದೆ. ನಿಮ್ಮ ಮಾಲತಿ ಜಲಾಶಯವನ್ನು ಕಟ್ಟುವುದರಿಂದ 26ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತದೆ. ಅದರಲ್ಲಿ ಫಾರೆಸ್ಟ್ , ಕಾಫಿಪ್ಲಾಂಟ್ ಇವುಗಳೆಲ್ಲ ಇರುತ್ತವೆ. 26ಸಾವಿರ ಎಕರೆ ಮುಳುಗಡೆಯಾಗುವುದಕ್ಕೆ ಕೇಂದ್ರ ಸರ್ಕಾರದಮರು ಪರವಾನಗಿಯನ್ನು ಕೊಡುತ್ತಾರೆಯೆ? ಪರಿಸರ ಇಲಾಖೆಯವರು ತಮ್ಮ ಸಮ್ಮತಿಯನ್ನು ಕೊಡುತ್ತಾರೆಯೇ? ಇದರ ಬಗ್ಗೆ ಮಾನ್ಯ ಮಂಜುನಾಥ್ ಕುನ್ನೂರುರವರು ದೀರ್ಘವಾಗಿ ಆಲೋಚನೆ ಮಾಡಿ ಮುಂದಿನ ಶಾಸನಸಭೆ ಅಧಿವೇಶನ ನಡೆಸುವಾಗ ಈ ಪ್ರಶ್ನೆಯನ್ನು ಹಾಕಬೇಕು.

ವಿಷಯ : ಹೊಸ ರಾಷ್ಟ್ರೀಯ ಹೆದ್ದಾರಿಗೆ ಮಂಜೂರಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 637

ಶ್ರೀ ವಾಟಾಳ್ ನಾಗರಾಜ್ ಮತ್ತು (ಚಾಮರಾಜನಗರ) ಮತ್ತು ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಎಷ್ಟು ರಾಷ್ಟ್ರೀಯ ಹೆದ್ದಾರಿಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ ;

ಆ) ಇದೇ ಅವಧಿಯಲ್ಲಿ ರಾಜ್ಯ ಸರ್ಕಾರವು ಯಾವ ಯಾವ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳೆಂದು ಪರಿವರ್ತಿಸಲು ಮಂಜೂರಾತಿಗಾಗಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ?

ಶ್ರೀ ಕೆ.ಹೆಚ್. ರಂಗನಾಥ್ : (ಲೋಕೋಪಯೋಗಿ ಸಚಿವರು)

ಅ) ಯಾವುದು ಇಲ್ಲ

ಆ) ಯಾವುದು ಇಲ್ಲ

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕ ಎರಡೂ ಪ್ರಶ್ನೆಗಳಿಗೆ ಯಾವುವು ಇಲ್ಲ, ಯಾವ ಪ್ರಸ್ತಾವನೆ ಇಲ್ಲವೆಂದು ಹೇಳಿದ್ದಾರೆ. ಬಹುಶಃ ಪ್ರಸ್ತಾವನೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ಸರ್ಕಾರದವರು ಒಂದು ಪುಸ್ತಕವನ್ನು ಮುದ್ರಣಮಾಡಿ 1972ನೇ ಇಸವಿಯಿಂದ ಇಲ್ಲಿಯವರೆಗೆ ಇಷ್ಟು ರಾಷ್ಟ್ರೀಯ ಹೆದ್ದಾರಿಗಳು ಬರಬೇಕಾಗಿದೆಯೆಂದು ತಿಳಿಸಿದ್ದಾರೆ. ಯಾವ್ಯಾವ ರಾಷ್ಟ್ರೀಯ ಹೆದ್ದಾರಿಗಳನ್ನು ಸೇರಿಸಿಕೊಂಡು ಇದಕ್ಕೆ ಮಂಜೂರಾತಿಯನ್ನು ಕೊಡಿಯೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೀರಿ?

ಸಾಮಾನ್ಯವಾಗಿ ನಿಮ್ಮ ಗಮನಕ್ಕೆ ಬಂದಿದ್ದರೆ, ತಾವು ಕೇಳುತ್ತಿದ್ದಿರಿ ಎಂದು ನಾನು ಅಂದುಕೊಂಡಿದ್ದೇನೆ. ಆದರೆ, ತಮ್ಮ ಗಮನಕ್ಕೆ ಬಾರದೇ ಇರಬಹುದು. ನನ್ನ ಮೊದಲನೇ ಪ್ರಶ್ನೆ " ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಎಷ್ಟು ರಾಷ್ಟ್ರೀಯ ಹೆದ್ದಾರಿಗಳನ್ನು ಕೇಂದ್ರಸರ್ಕಾರ ಮಂಜೂರ್ಮಾಡಿದೆ, " ಯಾವುವೂ ಇಲ್ಲ " ಎಂದು ಹೇಳಿದ್ದೀರಿ.ನನ್ನ ದೃಷ್ಟಿಯಿಂದ ಬರೀ ಮೂರು ವರ್ಷ ಅಲ್ಲ, ಎಷ್ಟು ವರ್ಷದಿಂದ ಮಾಡಿಲ್ಲವೆನ್ನುವುದು ಒಂದು.ಎರಡನೆಯದು ಇದೇ ಅವಧಿಯಲ್ಲಿ ರಾಜ್ಯ ಸರ್ಕಾರವು ಯಾವ ಯಾವ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳೆಂದು ಪರಿವರ್ತಿಸಲು ಮಂಜೂರಾತಿಗಾಗಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ" ನೀವು ಸಲ್ಲಿಸಿದ್ದೀರಿ, ಇವತ್ತು ನಾನು ತರಾತುರಿಯಲ್ಲಿ ಬಂದೆ. ಆ ಮುದ್ರಣವನ್ನು ನಾನು ನೋಡಿದ್ದೇನೆ. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಮೊನ್ನೆ ಕಳುಹಿಸಿದ್ದಾರೆ, ಕಳುಹಿಸಿ ಇನ್ನೂ ಒಂದು ವರ್ಷವೂ ಕೂಡ ಆಗಿಲ್ಲ, ನಾನು ಆ ಪುಸ್ತಕ ನೋಡಿದ್ದೇನೆ. ತಮ್ಮ ಗಮನಕ್ಕೆ ಬರಲಿಲ್ಲವೆಂದರೆ ಆ ಪುಸ್ತಕವನ್ನು ತಮಗೆ ಕೊಡುತ್ತೇನೆ. ನಮ್ಮ ರಾಜ್ಯದ ಪರಿಸ್ಥಿತಿ, ಯಾವ ಕಾರಣಕ್ಕೆ ಅವರು ರಾಷ್ಟ್ರೀಯ ಹೆದ್ದಾರಿಗಳನ್ನು ಕೊಡುತ್ತಾ ಇಲ್ಲ. ಮತ್ತು ತಾವು ಎಷ್ಟರಮಟ್ಟಿಗೆ ಒತ್ತಡವನ್ನು ತಂದ್ದಿದ್ದೀರಿ. ಈ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳನ್ನು ಸೇರಿಸಬೇಕೆಂದು ಸರ್ಕಾರ ನಿರ್ಧಾರ ಇದೆ. ಇದನ್ನು ತಾವು ದಯವಿಟ್ಟು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ಒಟ್ಟಾಗಿ ಅರ್ಥಮಾಡಿಕೊಳ್ಳಬೇಕು. ಕಳೆದ ಮೂರು ವರ್ಷದಲ್ಲಿ ಅಂದರೆ, ಅವರ " ಬಿ " ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಬೇಕು. ನಾವು ಕಳುಹಿಸಿಲ್ಲ ಎನ್ನತಕ್ಕಂತಾದ್ದು. ಆದರೆ, ಸರ್ಕಾರ ಕೇಂದ್ರಕ್ಕೆ ಯಾವ ರಸ್ತೆಗಳನ್ನು ನಮಗೆ ಸೇರಬೇಕೆಂದು ಕೊಡಲಾಗಿದೆ. ಆಂಧ್ರಪ್ರದೇಶದ ಗೂಟಿಯಿಂದ,

ಗುಂತಕಲ್ಲು, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ಗದಗ, ಹುಬ್ಬಳ್ಳಿ, ಕಾರವಾರ, ಇದು ಒಂದು ರಸ್ತೆ. ಇದು 472 ಕಿಲೋಮೀಟರ್. ಬೆಂಗಳೂರು, ಮೈಸೂರು,ನಂಜನಗೂಡು, ಗುಂಡ್ಲುಪೇಟೆ, ಊಟಿ, ಕೊಯಮತ್ತೂರು ಇದು ಒಂದು. ಇದು 220 ಕಿಲೋಮೀಟರ್. ಮೈಸೂರು, ಶ್ರೀರಂಗಪಟ್ಟಣ ನಾಗಮಂಗಲ, ಚಿಕ್ಕನಾಯ್ಕನಹಳ್ಳಿ, ಹುಳಿಯಾರು, ಹಿರಿಯಾರು, ಬಳ್ಳಾರಿ ಶಹಪುರ ಹುಮ್ನಾಬಾದ್ ರಾಷ್ಟ್ರೀಯ ಹೆದ್ದಾರಿ, ಇದು 678 ಕಿಲೋ ಮೀಟರ್. ತುಮಕೂರು, ಅರಸೀಕೆರೆ, ಶಿವಮೊಗ್ಗ, ಸಾಗರ, ಹೊನ್ನಾವರ, ಈ ರಸ್ತೆ 332 ಕಿಲೋಮೀಟರ್ ಉದ್ದದ್ದು. ಬೆಂಗಳೂರು, ಮೈಸೂರು,ಮಡಿಕೇರಿ, ಮಂಗಳೂರು 385 ಕಿಲೋಮೀಟರ್, ಉದ್ದ ಇರತಕ್ಕ ರಸ್ತೆ. ಬೆಳಗಾಂ, ಬಿಜಾಪುರ, ಗುಲ್ಬರ್ಗಾ, ಹುಮ್ನಾಬಾದ್ 366 ಕಿಲೋಮೀಟರ್ ಬೆಳಗಾಂ, ಬಾಗಲಕೋಟೆ, ರಾಯಚೂರು 336 ಕಿಲೋಮೀಟರ್.ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಚಿಕ್ಕಮಗಳೂರು , ಮೂಡಿಗೆರೆ, ಬೆಳ್ತಂಗಡಿ, ಬಂಟ್ವಾಳ್, ಮಂಗಳೂರು, 283 ಕಿಲೋಮೀಟರ್ ಧಾರವಾಡ, ಲೋಂಡಾ, ಪಣಜಿ, ರಾಷ್ಟ್ರೀಯ ಹೆದ್ದಾರಿ-17,95 ಕಿಲೋಮೀಟರ್ ಮೂಡುಬಿದ್ರೆ ಶೃಂಗೇರಿ, ತೀರ್ಥಹಳ್ಳಿ, ಶಿಕಾರಿಪುರ, ಕಾರ್ಕಳ, ಶಿರಾಳಕೊಪ್ಪ, ಹುಬ್ಬಳ್ಳಿ, ಬಾಗಲಕೋಟೆ, ಹುನಗುಂದ 550 ಕಿಲೋಮೀಟರ್, ಶಿರಾ, ಮಧುಗಿರಿ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಶ್ರೀನಿವಾಸಪುರ, ಮುಳುಬಾಗಿಲು 160 ಕಿಲೋಮೀಟರ್.ಚಿತ್ರದುರ್ಗ, ಶಿವಮೊಗ್ಗ, ಸಕಲೇಶಪುರ, ಮಡಿಕೇರಿ ಹಾಗೂ ಕೇರಳದ ತಲ್ಲಿಚೇರಿ 325 ಕಿಲೋಮೀಟರ್, ಬೆಂಗಳೂರು, ಕನಕಪುರ, ಮಳವಳ್ಳಿ, ನಂಜನಗೂಡು, ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ 250 ಕಿಲೋಮೀಟರ್-ಹೀಗೆ 4400 ಕಿಲೋಮೀಟರ್ ಉದ್ದದ ರಸ್ತೆಯ ಬೇಡಿಕೆಯನ್ನು ಕಳೆದ ಸುಮಾರು ವರ್ಷಗಳಿಂದ ಕಳುಹಿಸಿದ್ದೇವೆ. ಅದು ಕೇಂದ್ರದಲ್ಲಿ ಇದೆ. ಅದರ ಜೊತೆಗೆ ನಾವು ವಿಚಾರ ಮಾಡುತ್ತಿದ್ದೇವೆ. ಒಂದು ಬೈಪಾಸ್, ಕೋಲಾರದಿಂದ ಸೋಮಪುರ, ರಾಷ್ಟ್ರೀಯ ಹೆದ್ದಾರಿ-4 ಏನಿದೆ, ತಾವು ನೋಡಿರಬಹುದು, ದಾಬಸ್‌ಪೇಟೆಯಿಂದ ಹಾಗೆಯೇ ನೆಟ್ಟಗೆ ಹೋದರೆ, ನೇರವಾಗಿ ಮದ್ರಾಸ್ಸಿಗೆ ಹೋಗತಕ್ಕಂತಾದ್ದು, ಬೆಂಗಳೂರಿಗೆ ಬರಬೇಕಾದ್ದಿಲ್ಲ. ಮೇಕ್ರಿಸರ್ಕ್‌ಲ್‌ನಲ್ಲಿ ಆಗತಕ್ಕಂತಹ ಅನಾಹುತಗಳು ಆಗಬೇಕಾದ್ದಿಲ್ಲ. ಇದನ್ನು ತಪ್ಪಿಸುವುದಕ್ಕೆ ಒಂದು ಬೈಪಾಸ್ ಮಾಡಬೇಕೆಂಬ ವಿಚಾರವನ್ನು ಸರ್ಕಾರ ಇಟ್ಟುಕೊಂಡಿದೆ. ಡಿಸ್ಟ್ರಿಕ್ಟ್ ಹೈವೇದಿಂದ, ಸ್ಟೇಟ್ ಹೈವೇಗೆ ನಾವು ನೋಟಿಫಿಕೇಷನ್ ಕೊಟ್ಟು ಅದನ್ನು ಅಪ್ ಗ್ರೇಡ್ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇಷ್ಟನ್ನು ಕೇಂದ್ರಕ್ಕೆ ಸಲ್ಲಿಸಿದ್ದೇವೆಂದು ಹೇಳಿದರು. ಈ ಸಲ್ಲಿಕೆ ಎಷ್ಟು ವರ್ಷದಿಂದ ಕೇಂದ್ರದಲ್ಲಿದೆ. ಇದರ ಬಗ್ಗೆ ಫಲಪ್ರದವಾಗಿ ಕೇಂದ್ರದವರು ಅನುಮತಿ ಕೊಡದೇ ಇರುವುದಕ್ಕೆ ಕಾರಣವೇನು? ಮತ್ತೊಂದು ಮೈಸೂರು ನಂಜನಗೂಡು ಚಾಮರಾಜನಗರ, ಕೊಯಮತ್ತೂರು ಅದು ರಾಜ್ಯದ ಹೆದ್ದಾರಿ. ಇದನ್ನು ತಾವು ರಾಷ್ಟ್ರೀಯ ಹೆದ್ದಾರಿಯಾಗಿ ಸೇರಿಸುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಹಣಕಾಸಿನ ಅಡಚಣೆಯಿಂದ ಕೇಂದ್ರದವರು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂಬ ಕಾರಣವನ್ನು ಹೇಳುತ್ತಿದ್ದಾರೆ. ರಾಜ್ಯಸರ್ಕಾರ ಬಹಳ ದಿವಸದಿಂದ ಈ ಒಂದು ಬೇಡಿಕೆಯನ್ನು ಇಟ್ಟು ಒತ್ತಡವನ್ನು ತರುತ್ತಾ ಇದೆ. ಆದರೂ ಕೂಡ ನಾವು ಸಫಲವಾಗಿಲ್ಲ.

ಮಾನ್ಯ ಸದಸ್ಯರೇನು ಪ್ರಸ್ತಾಪ ಮಾಡುತ್ತಿದ್ದಾರೆ, ಚಾಮರಾಜನಗರ, ಸತ್ಯಮಂಗಲ ಮುಂದೆಹೋಗತಕ್ಕ ರಸ್ತೆ ಕೂಡ ಆಗುತ್ತದೆ. ನಮಗೆ ಒಂದೊಂದು ಸಾರಿ ಏನಾಗುತ್ತದೆಂದರೆ, ನಾವು ಕೇಳುವಾಗಲೂ ಕೂಡ ಎಲ್ಲಾ ಮದ್ರಾಸಿಗೆ, ಕೇರಳಕ್ಕೆ ಹೋಗುವ ರಸ್ತೆಗಳೇ ಆಗುತ್ತಿದೆ. ನಾವು ಇಲ್ಲಿಂದ ಬೇರೆ ಕಡೆಗೂ ಹೋಗತಕ್ಕ ರಸ್ತೆಗಳು ಜಾಸ್ತಿಯಾಗಬೇಕಾಗಿದೆ. ಇದೂ ಕೂಡ ಒಂದು ವಿಚಾರ ಇದೆ. ನಾವು ಇದನ್ನು ನೋಡುವಾಗ, ಯಾವುದಾದರೊಂದು ದೃಷ್ಟಿಯಲ್ಲಿಟ್ಟುಕೊಂಡು ಕಳುಹಿಸಿದ್ದೇವೆಯೇ ಅಥವಾ ನಮ್ಮ ನಮ್ಮ ಬೇಡಿಕೆಗಳನ್ನು ಮನಸಿನಲ್ಲಿಟ್ಟುಕೊಂಡು ಕಳುಹಿಸಿದ್ದೇವೆಯೇ ಎನ್ನತಕ್ಕಂತಾದ್ದೂ ಇದೆ. ಇವತ್ತು ಆ ರಸ್ತೆಗಳನ್ನು ನೋಡಿದರೆ, ಈ ರೀತಿ ಅನಿಸುತ್ತದೆ. ತಮಿಳುನಾಡಿಗೆ, ಕೇರಳಕ್ಕೆ, ನಮ್ಮ ರಾಜ್ಯದ ಮುಖಾಂತರ ಸಾಕಷ್ಟು ರಸ್ತೆಗಳು ಹೋಗಿವೆ. ಶ್ರೀರಂಗಪಟ್ಟಣ,ಬೀದರ್‌ಗೆ ಹೋಗತಕ್ಕಂತಾದ್ದು, ಅದು ಉತ್ತರಕ್ಕೆ ಹೋಗತಕ್ಕ ರಸ್ತೆ. ಇದನ್ನೂ ಕೂಡ ನಾವು ವಿಚಾರ ಮಾಡಬೇಕು. ಏಕೆಂದರೆ, ಮಂಗಳೂರಿನ ಬಂದರನ್ನು ಅಭಿವೃದ್ಧಿ ಮಾಡುತ್ತಿದ್ದೇವೆ. ಕೇಂದ್ರದ ಬಂದರನ್ನು ಅಭಿವೃದ್ಧಿ ಮಾಡುತ್ತಿದ್ದೇವೆ. ಉತ್ತರದಲ್ಲಿರತಕ್ಕ, ಮಧ್ಯಪ್ರದೇಶ, ಬಿಹಾರ್, ಉತ್ತರಪ್ರದೇಶ ಯಾವ ವ್ಯವಹಾರಕ್ಕೂ ಹಾರ್ಬರ್ಸ್ ಇಲ್ಲ. ಆ ವ್ಯವಹಾರವನ್ನು ನಮ್ಮ ಹಾರ್ಬರ್ಸ್ ಮುಖಾಂತರ ಮಾಡಬೇಕು. ಮದ್ರಾಸ್ ಮುಖಾಂತರ ವ್ಯಾಪಾರವಾಗುತ್ತದೆ. ಬೊಂಬಾಯಿ ಮುಖಾಂತರ ಆಗುತ್ತದೆ, ಗುಜರಾತ್ ಮುಖಾಂತರ ಆಗುತ್ತದೆ. ಈ ಕಡೆ ಒರಿಸ್ಸಾ ಮುಖಾಂತರ ಹೊರಗಡೆ ಹೋಗುತ್ತದೆ. ಆದರೆ, ನಮ್ಮ ರಾಜ್ಯದಲ್ಲಿರತಕ್ಕ ಬಂದರಿನ ಮುಖಾಂತರ ಯಾವ ವ್ಯವಹಾರ ಕೂಡ ಆಗುವುದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯನ್ನಿಟ್ಟುಕೊಂಡು ನಾವು ವಿಚಾರ ಮಾಡಬೇಕಾಗುತ್ತದೆ. ಆದರೆ, ನಾವು ಕೇಂದ್ರದ ಮೇಲೆ ಸಾಕಷ್ಟು ಒತ್ತಡವನ್ನು ತಂದಿದ್ದೇವೆ ಈ ಹಿನ್ನೆಲೆಯಲ್ಲಿ ಮತ್ತೆ ಮರುಪರಿಶೀಲನೆ ಮಾಡಿ, ಯಾವುದಾದರೂ ದೊಡ್ಡ ರಸ್ತೆಯನ್ನು ಸ್ಯಾಂಕ್ಷನ್ ಮಾಡಿಸಿಕೊಳ್ಳುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ರಾಜ್ಯದ ಹಿತದೃಷ್ಟಿಯಿಂದ, ರಾಷ್ಟ್ರದ ಹಿತದೃಷ್ಟಿಯಿಂದ, ವ್ಯಾಪಾರ ಉದ್ದಿಮೆಯ ಹಿತದೃಷ್ಟಿಯಿಂದ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ನಾರಾಯಣರಾವ್ ಮನಹಳ್ಳಿ : ಮಾನ್ಯ ಅಧ್ಯಕ್ಷರೇ, ಈಗಾಗಲೇ, ಸುಮಾರು ವರ್ಷಗಳಿಂದ ನಮ್ಮ ಬೇಡಿಕೆ ಕೇಂದ್ರದಲ್ಲಿ ಇದೆ. ಈ ಮಾತನ್ನು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಆದರೆ, ಬರೀ ಕರ್ನಾಟಕದ ವಿಷಯದಲ್ಲಿ ಈ ತರಹ ಮಲತಾಯಿ ಧೋರಣೆ ಇದೆಯೇ ಅಥವಾ ಬೇರೆ ಪ್ರಾಂತ್ಯದವರಿಗೂ ಇದೇ ಪ್ರಕಾರ ಇದೆಯೇ ಇದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು : ಭೈರೇಗೌಡರೇ ತಾವು ಕುಳಿತುಕೊಳ್ಳಿ. ಪ್ರಶ್ನೆ ಕೇಳಿರುವವರು, ಉಪ ಪ್ರಶ್ನೆ ಕೇಳಲಿ. ಆಮೇಲೆ ತಾವು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ : ಮಲತಾಯಿ ಧೋರಣೆ ಮಾಡುತ್ತಿದ್ದಾರೆ ಎಂಬ ಆಪಾದನೆಯನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಹಣಕಾಸಿನ ಒತ್ತಡದಿಂದ ಆಗಿಲ್ಲ. ಇಲ್ಲಿ ಅಧಿಕಾರಿಗಳು ಬಂದಾಗ, ಮತ್ತು ಮೊನ್ನೆ ತಾನೆ ಕೇಂದ್ರದ ಸಾರಿಗೆ ಸಚಿವರು ಬಂದಿದ್ದರು. 8ನೇ ಪಂಚವಾರ್ಷಿಕ

ಯೋಜನೆಯಲ್ಲಿ ಈ ರಸ್ತೆಗೆ, ನೀರಾವರಿಗೆ ಇದಕ್ಕೆಲ್ಲಾ ಹಣ ಇರತಕ್ಕಂಥಾದ್ದು ಸ್ವಲ್ಪ ಕಡಿಮೆ ಇದೆ. ಹೀಗಾಗಿ ಅಮರು ನಮ್ಮ ಬೇಡಿಕೆಗಳನ್ನು ಮಾನ್ಯ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಷ್ಟನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ, ಮಾನ್ಯ ಭೈರೇಗೌಡರು ಏನು ಪ್ರಸ್ತಾಪ ಮಾಡುತ್ತಾ ಇದ್ದರು...

ಶ್ರೀ ಸಿ. ಭೈರೇಗೌಡರು : ಪಕ್ಕದ ರಾಜ್ಯಗಳಾದ ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಎಷ್ಟು ರಾಜ್ಯ ಹೆದ್ದಾರಿಗಳನ್ನು, ರಾಷ್ಟ್ರೀಯ ಹೆದ್ದಾರಿಗಳಾಗಿ ಮಾಡಿದ್ದಾರೆ. ಈ ಮಾಹಿತಿಯನ್ನು ಕೊಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಹೆಚ್. ರಂಗನಾಥ್ : ಈ ವಿಷಯವಾಗಿ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ನನಗನಿಸುತ್ತದೆ. ಕೇಂದ್ರದ ಮಲತಾಯಿಧೋರಣೆ ಇದು. ನಿಜವಾಗಿಯೂ ನಮ್ಮ ರಾಜ್ಯಕ್ಕೆ ಅವರು ಮಾಡುತ್ತಿರತಕ್ಕ ಅನ್ಯಾಯ. 1972ರಿಂದ ಒಂದು ಹೆದ್ದಾರಿಗೂ ಮಂಜೂರಾತಿ ಕೊಡುತ್ತಾ ಇಲ್ಲ. ಕೇಂದ್ರದ ನೀತಿಯ ವಿರುದ್ಧ ನಾವು ಸಭಾತ್ಯಾಗ ಮಾಡುತ್ತಿದ್ದೇವೆ. ನಿಮಗೆ ಕೇಂದ್ರದ ಮೇಲೆ ಒತ್ತಡ ತರುವುದಕ್ಕಾಗುತ್ತಿಲ್ಲ. ಪಕ್ಕದ ರಾಜ್ಯಗಳಾದ ಕೇರಳ ಮತ್ತಿತರ ರಾಜ್ಯಗಳಿಗೆ ಅನುಕೂಲ ಮಾಡಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಮೊದಲಿನಿಂದಲೂ ಮೋಸ ಮಾಡುತ್ತಿದ್ದಾರೆ.

(ಗೊಂದಲ)

(ಶ್ರೀ ವಾಟಾಳ್ ನಾಗರಾಜ್, ಶ್ರೀ ಸಿ. ಭೈರೇಗೌಡ ಮತ್ತು ಶ್ರೀ ನಾರಾಯಣರಾವ್ ಮನಹಳ್ಳಿ ಅವರುಗಳು ಸಭಾತ್ಯಾಗ ಮಾಡಿದರು.)

ವಿಷಯ : ಕನಕಪುರ ತಾಲ್ಲೂಕು ಕೋಡಿ ಹಳ್ಳಿ ಹೋಬಳಿ ಚಿಕ್ಕೊಂಡನಹಳ್ಳಿ ಕೆರೆ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 143 (701)

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ ಚಿಕ್ಕೊಂಡನಹಳ್ಳಿ ಕೆರೆ ನಿರ್ಮಾಣ 1961-62ರಲ್ಲಿ ಪ್ರಾರಂಭವಾಗಿ 1975ಕ್ಕೆ ಮುಕ್ತಾಯಗೊಂಡ ಕೆರೆ ನಿರ್ಮಾಣಕ್ಕೆ ಜಮೀನು ಸ್ವಾಧೀನ ಪಡಿಸಿಕೊಂಡಿದ್ದು ಜಮೀನು ಮಾಲೀಕರಿಗೆ ಪರಿಹಾರವಾಗಿ ಇದುವರೆಗೆ ನೀಡಿರುವ ಹಣವೆಷ್ಟು;

ಆ. ಸ್ವಾಧೀನಪಡಿಸಿಕೊಂಡ ಎಲ್ಲಾ ಜಮೀನು ಮಾಲೀಕರಿಗೂ ಪರಿಹಾರ ನೀಡಲಾಗಿದೆಯೇ ಮತ್ತು ಪರಿಹಾರ ಹಣ ನೀಡುವುದು ತುಂಬಾ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ ಮಾಲೀಕರಿಗೆ ಪರಿಹಾರ ಹಣದ ಜೊತೆಗೆ ಬಡ್ಡಿ ಸೇರಿಸಿ ಪರಿಹಾರ ನೀಡಲಾಗುವುದೆ?